2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟ ಇವರ ನ್ಯಾಯಾಲಯದಲ್ಲಿ

ಸತ್ರ ಮೊಕದ್ದಮೆ ಸಂಖ್ಯೆ 66/2012

| | | | |
|---|---|---|---|
| ಹೆಸರು | ಃ | ಸಂಗಪ್ಪ ಸಿಂಗಾಡೆ | ಫ್ರಾಸಾ-01 |
| ತಂದೆಯ ಹೆಸರು | ಃ | ಚನ್ನಸಂಗಪ್ಪ | ಚಾಸಾ-01 |
| ವಯಸ್ಸು | ಃ | 45 ವರ್ಷ | |
| ಉದ್ಯೋಗ | ಃ | ಒಕ್ಕಲುತನ | |
| ವಾಸಸ್ಥಳ | ಃ | ನಾಗೂರ, ತಾಃ ಹುನಗುಂದ | |

ದಿನಾಂಕಃ 06-08-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

## ಸಾಕ್ಷಿಯ ವಿಚಾರಣೆಃ ಕಲಂ 299 ಸಿ.ಆರ್.ಪಿ.ಸಿ., ಅಡಿಯಲ್ಲಿ

### ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ

2011 ನೇ ಇಸ್ವಿಯಲ್ಲಿ ಟಿವಿಎಸ್ ಕಂಪನಿಯ ವಿಕ್ಟರ್ ದ್ವಿಚಕ್ರ ವಾಹನ ಸಂಖ್ಯೆ ಕೆಎ-26/5068 ವಾಹನ ನನ್ನ ಬಳಿ ಇತ್ತು. ನಾನು ಮತ್ತು ಚಾಸಾ-7 ಗುಂಡಪ್ಪ ಸದರಿ ದ್ವಿಚಕ್ರ ವಾಹನವನ್ನು ಸರ್ವೀಸ್ ಮಾಡಿಸಲು ಅಂತಾ ಇಲಕಲ್ಲ ಶಹರಕ್ಕೆ ಹೋಗಿದ್ದೆವು. ನಂತರ ರಾತ್ರಿ 8-30 ಕ್ಕೆ ನಾನು ಮತ್ತು ಚಾಸಾ-7 ಗುಂಡಪ್ಪ ವಾಪಸ್ ಊರಿಗೆ ಅಂತಾ ಇಲಕಲ್ಲ ಮಾರ್ಗವಾಗಿ ಬರುತ್ತಿದ್ದಾಗ ಸುಮಾರು 2 ಕಿ.ಮೀ. ನಂತರ ಒಂದು ಫ್ಯಾಕ್ಟರಿಯ ಬಳಿ ರಸ್ತೆಯ ಮೇಲೆ ನಾವು ಹೋಗುತ್ತಿದ್ದಾಗ ಇಬ್ಬರು ವ್ಯಕ್ತಿಗಳು ರಸ್ತೆ ಬದಿಯ ಸೂರ್ಯಪಾನ ಬೆಳೆಯಲ್ಲಿ ಅವಿತು ಕುಳಿತಿದ್ದರು ಹಟಾತ್ ಆಗಿ ಬಂದು ನಮ್ಮನ್ನು ಗಾಬರಿಪಡಿಸಿದರು. ಅವರ ಕೈಯಲ್ಲಿ ಒಂದು ಚಾಕು, ಮತ್ತೊಬ್ಬನ ಕೈಯಲ್ಲಿ ಒಂದು ಬಡಿಗೆ ಇತ್ತು. ಒಬ್ಬ ಚಾಕು ಹಾಕಲು ಬಂದ, ನಾನು ಆತನ ಕೈಯನ್ನು ಹಿಡಿದುಕೊಂಡೆ, ಆಗ ಮತ್ತೊಬ್ಬ ವ್ಯಕ್ತಿ ಬಡಿಗೆಯಿಂದ ನನ್ನ ಸೊಂಟಕ್ಕೆ ಹೊಡೆದ. ಆ ಕಾಲಕ್ಕೆ ಚಾಸಾ-7 ವಾಹನವನ್ನು ಚಲಾಯಿಸುತ್ತಿದ್ದ. ನಾನು ಹಿಂಬದಿಯ ಶೀಟ್‌ನಲ್ಲಿ ಕುಳಿತಿದ್ದೆ. ನಂತರ ಆ ಇಬ್ಬರೂ ನನ್ನ ಮತ್ತು ಚಾಸಾ-7 ರವರ ಕೈ, ಕಾಲು ಕಟ್ಟಿ ಸೂರ್ಯಪಾನ ಬೆಳೆಯ ಒಳಗೆ ಎಳೆದುಕೊಂಡು ಹೋಗಿ ನ್ನನ ಬಳಿ ಇದ್ದ ರೂ.8,000/- ನಗದು ಹಣ ಮತ್ತು ಒಂದು ನೋಕಿಯಾ ಕಂಪನಿಯ ಮೊಬೈಲನ್ನು ಕಸಿದುಕೊಂಡು ನನ್ನ ದ್ವಿಚಕ್ರ ವಾಹನವನ್ನು ಸಹ ಎತ್ತಿಕೊಂಡು ಹೋಗಿರುತ್ತಾರೆ. ಚಾಸಾ-7 ರವರ ಬಳಿ ಇದ್ದ ರೂ.2,000/- ನಗದು ಹಣ ಮತ್ತು ಆತನ ಮೊಬೈಲ್‌ನ್ನು ಸಹ ಆ ಇಬ್ಬರು ವ್ಯಕ್ತಿಗಳು

ಕಸಿದುಕೊಂಡು ಹೋಗಿರುತ್ತಾರೆ. ಚಾಸಾ-7 ಗುಂಡಪ್ಪನಿಗೂ ಸಹ ಚಾಕು ತೋರಿಸಿ ವಾಹನವನ್ನು ಕೊಡುವಂತೆ ಬೆದರಿಕೆ ಹಾಕಿರುತ್ತಾರೆ. ಆ ಇಬ್ಬರೂ ನನಗೆ ಹೊಡೆದಿದ್ದರಿಂದ, ನನ್ನ ಸೊಂಟಕ್ಕೆ ಪೆಟ್ಟಾಯಿತು. ನಂತರ ನಾವು ಇಲಕಲ್ಲ ನಗರಕ್ಕೆ ನಡೆದುಕೊಂಡು ಹೋಗಿ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತೇವೆ. ಸಾಕ್ಷಿಯು ಈಗ ಸದರಿ ದೂರು ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಶಾನೆ ಪಿ-1 ಮತ್ತು ಸಹಿಯನ್ನು ನಿಶಾನೆ ಪಿ-1(ಎ) ಅಂತಾ ಗುರುತಿಸಲಾಯಿತು.

ಆನಂತರ ಪೋಲಿಸರು ನಮ್ಮನ್ನು ದವಾಖಾನೆಗೆ ಕಳುಹಿಸಿ ಕೊಟ್ಟಿರುತ್ತಾರೆ. ನಂತರ ಮರುದಿನ 6-00 ಗಂಟೆಗೆ ಪೋಲಿಸರು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋದಾಗ ನಾನು ಘಟನಾ ಸ್ಥಳವನ್ನು ತೋರಿಸಿರುತ್ತೇನೆ. ಆನಂತರ ಪೊಲೀಸರು ನನ್ನ ಮತ್ತು ಇಬ್ಬರು ವಕ್ತಿಗಳ ಸಮಕ್ಷಮ ಪಂಚನಾಮೆ ಮಾಡಿ ಎರಡು ಭಾವಚಿತ್ರಗಳನ್ನು ತೆಗೆಸಿರುತ್ತಾರೆ. ಸಾಕ್ಷಿಯು ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಶಾನೆ ಪಿ-2 ಮತ್ತು 3 ಅಂತಾ ಗುರುತಿಸಲಾಯಿತು. ಆ ಕಾಲಕ್ಕೆ ಸ್ಥಳದಲ್ಲಿ ಬಿದ್ದಿದ್ದ ಒಂದು ಬಡಿಗೆಯನ್ನು ಸಹ ಪೊಲೀಸರು ಜಪ್ತಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಬಡಿಗೆಯನ್ನು ನೋಡಿ ಗುರುತಿಸಿದ್ದು, ಅದನ್ನು ಮುದ್ದೆಮಾಲು-1 ಅಂತಾ ಗುರುತಿಸಲಾಯಿತು.

ಘಟನೆಯಾದ ಎರಡು ದಿನಗಳ ನಂತರ ನನ್ನ ದ್ವಿಚಕ್ರ ವಾಹನ ಮಣ್ಣೇರಹಾಳ ಅನ್ನುವ ಊರಿನಲ್ಲಿ ಬಿಟ್ಟು ಹೋಗಿದ್ದರು ಅಂತಾ ನನಗೆ ತಿಳಿಯಿತು. ನಂತರ ನಾನು ನನ್ನ ದ್ವಿಚಕ್ರ ವಾಹನವನ್ನು ಹುನಗುಂದ ನ್ಯಾಯಾಲಯದಿಂದ ಬಿಡಿಸಿಕೊಂಡಿರುತ್ತೇನೆ. ಸದರಿ ವಾಹನ ನನ್ನ ಮಾವನಾದ ರವಿ ಗಡೇದ ಇವರ ಹೆಸರಿನಲ್ಲಿ ನೋಂದಾಯಿಸಲ್ಪಟ್ಟಿರುತ್ತದೆ. ಸದರಿಯವರು ದ್ವಿಚಕ್ರ ವಾಹನವನ್ನು ನ್ಯಾಯಾಲಯದಿಂದ ಬಿಡಿಸಿಕೊಂಡಿರುತ್ತಾರೆ. ಸಾಕ್ಷಿಯು ಈಗ ಒಂದು ಫೋಟೋದಲ್ಲಿ ತನ್ನ ಮಾವ ಮತ್ತು ದ್ವಿಚಕ್ರ ವಾಹನ ಇರುವುದನ್ನು ನೋಡಿ ಗುರುತಿಸಿದ್ದು, ಭಾವಚಿತ್ರವನ್ನು ನಿಶಾನೆ ಪಿ-4 ಅಂತಾ ಗುರುತಿಸಲಾಯಿತು. ನನ್ನ ದ್ವಿಚಕ್ರ ವಾಹನ ದೊರೆತ ಸ್ಥಳದಲ್ಲಿ ಸಹ ಪೊಲೀಸರು ನನ್ನ ಸಮಕ್ಷಮ ಒಂದು ಪಂಚನಾಮೆ ಮಾಡಿ

ಫೋಟೋ ತೆಗೆಸಿರುತ್ತಾರೆ. ಸಾಕ್ಷಿಯು ಈಗ ಸದರಿ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-5 ಅಂತಾ ಗುರುತಿಸಲಾಯಿತು.

ಇದಾದ ಎರಡು ತಿಂಗಳ ನಂತರ ಪೊಲೀಸರು ದರೋಡೆ ಮಾಡಿದ ಕಳ್ಳರು ಸಿಕ್ಕಿರುತ್ತಾರೆ, ಅವರನ್ನು ಗುರುತಿಸಲು ಬರಬೇಕು ಅಂತಾ ಇಲಕಲ್ಲ ಪೊಲೀಸ್ ಠಾಣೆಗೆ ಕರೆಯಿಸಿದ್ದರು, ಅಲ್ಲಿಂದ ನನ್ನನ್ನು ಬಾಗಲಕೋಟ ಸೆಂಟ್ರಲ್ ಜೈಲಿಗೆ ತಹಶೀಲ್ದಾರ ಜೈನಾಬ್ ಇವರ ಜೀಪ್‌ನಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಜೈಲಿನಲ್ಲಿ ಒಂದು ಕೋಣೆಯಲ್ಲಿ ಒಂಬತ್ತು ಜನರನ್ನು ನಿಲ್ಲಿಸಿದ್ದರು, ಅವರ ಪೈಕಿ ನಾನು ನಮ್ಮ ಮೇಲೆ ದರೋಡೆ ಮಾಡಿದ ವಕ್ತಿಗಳನ್ನು ಗುರುತು ಹಿಡಿದೆನು. ನಂತರ ಮತ್ತೊಂದು ಬಾರಿ ಸದರಿ ವ್ಯಕ್ತಿಗಳು ತಮ್ಮ ಬಟ್ಟೆಗಳನ್ನು ಬದಲಾಯಿಸಿಕೊಂಡು ಬಂದು ಅದಲು ಬದಲಾಗಿ ನಿಂತುಕೊಂಡಾಗಲೂ ಸಹ ನಾನು ನಮ್ಮ ಮೇಲೆ ಹಲ್ಲೆ ಮಾಡಿದಂತಹ ಇಬ್ಬರು ವ್ಯಕ್ತಿಗಳನ್ನು ಗುರುತಿಸಿ ತಹಶೀಲ್ದಾರ ಇವರಿಗೆ ಹೇಳಿರುತ್ತೇನೆ. ಸದರಿ ಇಬ್ಬರು ವ್ಯಕ್ತಿಗಳನ್ನು ನಾನು ನೋಡಿದರೆ ಈಗಲೂ ಸಹ ಗುರುತಿಸಲು ಸಾಧ್ಯವಾಗುತ್ತದೆ. ಈ ಬಗ್ಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

Sd/-
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟ ಇವರ ನ್ಯಾಯಾಲಯದಲ್ಲಿ

ಸತ್ರ ಮೊಕದ್ದಮೆ ಸಂಖ್ಯೆ: 66/2012

| | | | |
|---|---|---|---|
| ಹೆಸರು | : | ಮಹಾಂತೇಶ ಅಡೂರ | ಫ್ರಾಸಾ-02 |
| ತಂದೆಯ ಹೆಸರು | : | ಶರಣಪ್ಪ | ಚಾಸಾ-05 |
| ವಯಸ್ಸು | : | 32 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಾಸಸ್ಥಳ | : | ಮಣ್ಣೇರಹಾಳ, ತಾ: ಕುಷ್ಟಗಿ | |

ದಿನಾಂಕ: 06-08-2019 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಸಾಕ್ಷಿಯ ವಿಚಾರಣೆ: ಕಲಂ 299 ಸಿ.ಆರ್.ಪಿ.ಸಿ., ಅಡಿಯಲ್ಲಿ</u>**

<u>ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:</u>

ಈಗ ಸುಮಾರು 8 ರಿಂದ 9 ವರ್ಷಗಳ ಹಿಂದೆ ಮಣ್ಣೇರಹಳದಿಂದ ಹನಮಸಾಗರಕ್ಕೆ ಹೋಗುವ ರಸ್ತೆಯಲ್ಲಿ ಪೋಲಿಸರು ಮತ್ತು ಚಾಸಾ-1 ಇವರು ಪಂಚನಾಮೆಗೆ ಅಂತಾ ಬಂದಿದ್ದರು. ರಸ್ತೆ ಬದಿಯಲ್ಲಿ ಒಂದು ಟಿವಿಎಸ್ ವಿಕ್ಟರ್ ಎಂಬ ದ್ವಿಚಕ್ರ ವಾಹನ ಬಿದ್ದಿದ್ದು, ಅದು ಚಾಸಾ-1 ರವರಿಗೆ ಸೇರಿದ್ದು ಅಂತಾ ಪೋಲಿಸರು ತಿಳಿಸಿದ್ದು, ನನ್ನ ಮತ್ತು ಚಾಸಾ-6 ಇವರ ಸಮಕ್ಷಮ ಪೊಲೀಸರು ಪಂಚನಾಮೆ ಮಾಡಿ ಸದರಿ ವಾಹನವನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ, ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಈಗ ತನ್ನ ಸಹಿಯನ್ನು ಪಂಚನಾಮೆಯಲ್ಲಿ ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಶಾನೆ ಪಿ-6 ಮತ್ತು ಸಹಿಯನ್ನು ನಿಶಾನೆಪಿ-6(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ಚಾಸಾ-1 ಮತ್ತು ದ್ವಿಚಕ್ರ ವಾಹನವನ್ನು ನಿಶಾನೆ ಪಿ-5 ಭಾವಚಿತ್ರದಲ್ಲಿ ನೋಡಿ ಗುರುತಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

Sd/-
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟ.